# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ (PMMSY) ಅನುಷ್ಠಾನ ಮಾಡಲು ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸುವ ಬಗ್ಗೆ.

**ಓದಲಾಗಿದೆ:-** (1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಜಿ-117012-2/2020 ಎಫ್ ವೈ, ದಿನಾಂಕ: 08-06-2020.

(2) ಪತ್ರ ಸಂಖ್ಯೆ: ಮೀನಿ/ತಾಂತ್ರಿಕ/ನೀಲಿಕ್ರಾಂತಿ/13/2020, ದಿನಾಂಕ: 16-06-2020.

******

## ಪ್ರಸ್ತಾವನೆ:-

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ, ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯು (PMMSY) ಭಾರತದ ಮೀನುಗಾರಿಕಾ ಕ್ಷೇತ್ರದ ಸುಸ್ಥಿರ ಮತ್ತು ಜವಾಬ್ದಾರಿಯುತ ಬೆಳವಣಿಗೆಗಾಗಿ ರೂಪಿಸಿರುವ ಯೋಜನೆಗೆ ಸಂಬಂಧಿಸಿದಂತೆ ಸಂಕ್ಷಿಪ್ತ ಮಾರ್ಗಸೂಚಿಗಳನ್ನು ಹೊರಡಿಸಿ, ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಶಿಫಾರಸ್ಸು ಅನುಮೋದನಾ ಸಮಿತಿಗಳನ್ನು ರಚಿಸಲು ಸೂಚಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತಂದು ಮೀನುಗಾರಿಕೆ ವಲಯದ ಮತ್ತು ಮೀನುಗಾರರ ಸಾಮಾಜಿಕ ಮತ್ತು ಆರ್ಥಿಕ ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಪ್ರಸ್ತಾಪಿಸಲಾಗಿದೆ.

1) ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ.

2) ಕರಾವಳಿ ಮೀನುಗಾರಿಕೆ ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ

3) ಮೀನುಗಾರಿಕಾ ವಲಯದ ದತ್ತಾಂಶ ಮತ್ತು ಭೂಶಾಸ್ತ್ರ ಮಾಹಿತಿ ವ್ಯವಸ್ಥೆಯನ್ನು ಬಲಪಡಿಸುವುದು.

4) ಮೀನುಗಾರಿಕಾ ವಲಯಕ್ಕೆ ಸಾಂಸ್ಥಿಕ ವ್ಯವಸ್ಥೆ.

5) ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ

ಈ ಯೋಜನೆಗಳ ಅನುಮೋದನೆ ಮತ್ತು ನಿರ್ವಹಣೆಗಾಗಿ ಕೇಂದ್ರ ಸರ್ಕಾರದ ಆದೇಶದನ್ವಯ ಕೇಂದ್ರದ ಉನ್ನತ ಸಮಿತಿಯನ್ನು ರಚಿಸಿ ಭಾರತ ಸರ್ಕಾರವು ಆದೇಶ ಹೊರಡಿಸಿರುತ್ತದೆ. ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಮಾರ್ಗಸೂಚಿಗಳಲ್ಲಿ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ಶಿಫಾರಸ್ಸು / ಅನುಮೋದನೆ ಮಾಡಲು ರಾಜ್ಯ ಮಟ್ಟದ ಅನುಮೋದನೆ ಮತ್ತು ಉಸ್ತುವಾರಿ ಸಮಿತಿ ಹಾಗೂ ಜಿಲ್ಲಾ ಮಟ್ಟದ ಸಮಿತಿ (ಡಿಎಲ್‌ಸಿ) ರಚಿಸಿ ಯೋಜನೆಗಳನ್ನು ಈ ಮೂಲಕ ನಿರ್ವಹಿಸಲು ತಿಳಿಸಲಾಗಿದೆ. ಈ ಹಿಂದೆ ಭಾರತ ಸರ್ಕಾರದ ನೀಲಿಕ್ರಾಂತಿ ಯೋಜನೆ ಅನುಷ್ಠಾನಕ್ಕಾಗಿ ಆದೇಶ ಸಂಖ್ಯೆ: AHF 76 SFS 2018, ದಿನಾಂಕ: 06-06-2018 ರಲ್ಲಿ ರಚಿಸಲಾಗಿದ್ದ ರಾಜ್ಯ ಮಟ್ಟದ (SLAMC) ಸಮಿತಿಯನ್ನು ರದ್ದುಪಡಿಸಿ, ಅಧಿಕಾರಿ ಮತ್ತು ಸದಸ್ಯರ ನ್ನೊಳಗೊಂಡಂತೆ ರಾಜ್ಯ ಮಟ್ಟದ ಸಮಿತಿಯನ್ನು ಹಾಗೂ ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಜಿಲ್ಲಾ ಮಟ್ಟದ ಅನುಮೋದನಾ ಸಮಿತಿಯನ್ನು (ಡಿಎಲ್‌ಸಿ) ರಚಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ (PMMSY) ಅನುಷ್ಠಾನ ಮಾಡಲು ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-131/ಮೀಇಯೋ/2020, ಬೆಂಗಳೂರು, ದಿನಾಂಕ: 08-07-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಭಾರತ ಸರ್ಕಾರದ ನೀಲಿಕ್ರಾಂತಿ ಯೋಜನೆ ಅನುಷ್ಠಾನಕ್ಕಾಗಿ ಆದೇಶ ಸಂಖ್ಯೆ: AHF 76 SFS 2018, ದಿನಾಂಕ: 06-06-2018 ರಲ್ಲಿ ರಚಿಸಲಾಗಿದ್ದ ರಾಜ್ಯ ಮಟ್ಟದ (SLAMC) ಸಮಿತಿಯನ್ನು ರದ್ದುಪಡಿಸಿ, ಭಾರತದ ಮೀನುಗಾರಿಕಾ ಕ್ಷೇತ್ರದ ಸುಸ್ಥಿರ ಮತ್ತು ಜವಾಬ್ದಾರಿಯುತ ಬೆಳವಣಿಗೆಗಾಗಿ ರೂಪಿಸಿರುವ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ (PMMSY) ಮಾರ್ಗಸೂಚಿಗಳಲ್ಲಿ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ಶಿಫಾರಸ್ಸು / ಅನುಮೋದನೆ ಮಾಡಲು ಈ ಆದೇಶದ **ಅನುಬಂಧ** ದಲ್ಲಿ ನಮೂದಿಸಿರುವಂತೆ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು

(ಎಸ್.ಎಲ್.ಎ.ಎಂ.) ಮತ್ತು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿ ಯನ್ನು (ಡಿ.ಎಲ್.ಸಿ.) ಕೆಳಕಂಡ ಅಧಿಕಾರಿ ಮತ್ತು ಸದಸ್ಯರುಗಳನ್ನೊಳಗೊಂಡಂತೆ ರಚಿಸಿ ಆದೇಶಿಸಿದೆ.

**(1) ರಾಜ್ಯ ಮಟ್ಟದ ಸಮಿತಿ (SLAM)**

| ಕ್ರ. ಸಂ. | ಸದಸ್ಯರು | ಪದನಾಮ |
|---|---|---|
| 1. | ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ | ಅಧ್ಯಕ್ಷರು |
| 2. | ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸದಸ್ಯರು |
| 3. | ಕಾರ್ಯದರ್ಶಿಗಳು, ಜಲಸಂಪನ್ಮೂಲ/ನೀರಾವರಿ | ಸದಸ್ಯರು |
| 4. | ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | ಸದಸ್ಯರು |
| 5. | ಮೀನುಗಾರಿಕೆ ವಿಶ್ವವಿದ್ಯಾಲಯ/ಸಂಶೋಧನಾ ಕೇಂದ್ರದ ಪ್ರತಿನಿಧಿ (ಕಾರ್ಯದರ್ಶಿಯವರಿಂದ ನಾಮ ನಿರ್ದೇಶನ) | ಸದಸ್ಯರು |
| 6. | ಸಮನ್ವಯಕರು, ಎಸ್.ಎಲ್.ಬಿ.ಸಿ. | ಸದಸ್ಯರು |
| 7. | ಮೀನುಗಾರಿಕಾ ನಿರ್ದೇಶಕರು, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**(2) ಜಿಲ್ಲಾ ಮಟ್ಟದ ಸಮಿತಿ (DLC)**

| ಕ್ರ. ಸಂ. | ಸದಸ್ಯರು | ಪದನಾಮ |
|---|---|---|
| 1. | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯರು |
| 3. | ಜಲಸಂಪನ್ಮೂಲ ಮತ್ತು ನೀರಾವರಿ, ಕೃಷಿ, ಡಿಆರ್ ಡಿಎ, ಐಟಿಡಿಎ ಇತ್ಯಾದಿ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು | ಸದಸ್ಯರು |
| 4. | ಒಬ್ಬ ಪ್ರಗತಿಪರ ಮೀನುಗಾರ/ಕೃಷಿಕ (ಸಮಿತಿಯ ಅಧ್ಯಕ್ಷರಿಂದ ನಾಮನಿರ್ದೇಶನ) | ಸದಸ್ಯರು |
| 5. | ಲೀಡ್ ಬ್ಯಾಂಕ್ ಮ್ಯಾನೇಜರ್, | ಸದಸ್ಯರು |
| 6. | ಕೃಷಿ ವಿಕಾಸ ಕೇಂದ್ರದ ಜಿಲ್ಲಾಮಟ್ಟದ ಅಧಿಕಾರಿ | ಸದಸ್ಯರು |

| | | |
|---|---|---|
| 7. | ಮೀನುಗಾರಿಕೆ ವಿಶ್ವವಿದ್ಯಾಲಯದ ಪ್ರತಿನಿಧಿ (ಸಮಿತಿಯ ಅಧ್ಯಕ್ಷರಿಂದ ನಾಮನಿರ್ದೇಶನ | ಸದಸ್ಯರು |
| 8. | ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಹೆಸರಿನಲ್ಲಿ

Kamakshi U.A. 8/4/2020
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಮೀನುಗಾರಿಕೆ)

**ಇವರಿಗೆ,**

1. ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಕಾರ್ಯದರ್ಶಿ, ಜಲಸಂಪನ್ಮೂಲ / ನೀರಾವರಿ, ವಿಕಾಸಸೌಧ, ಬೆಂಗಳೂರು.
3. ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಮೀನುಗಾರಿಕೆ ವಿಶ್ವವಿದ್ಯಾಲಯ / ಸಂಶೋಧನಾ ಕೇಂದ್ರದ ಪ್ರತಿನಿಧಿ
5. ಸಮನ್ವಯಕರು, ಎಸ್.ಎಲ್.ಬಿ.ಸಿ.,
6. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
7. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್,
8. ಜಲಸಂಪನ್ಮೂಲ ಮತ್ತು ನೀರಾವರಿ ಕೃಷಿ, ಡಿಆರ್ ಡಿಎ, ಐಟಿಡಿಎ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
9. ಲೀಡ್ ಬ್ಯಾಂಕ್ ಮ್ಯಾನೇಜರ್,
10. ಕೃಷಿ ವಿಕಾಸ ಕೇಂದ್ರದ ಜಿಲ್ಲಾ ಮಟ್ಟದ ಅಧಿಕಾರಿ
11. ಮೀನುಗಾರಿಕೆ ವಿಶ್ವವಿದ್ಯಾಲಯದ ಪ್ರತಿನಿಧಿ
12. ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ
13. ಸಂಬಂಧಪಟ್ಟ ಅಧಿಕಾರಿಗಳಿಗೆ (ಕ್ರಮ ಸಂಖ್ಯೆ 4 ರಿಂದ 13 ರವರೆಗೆ ನಮೂದಿಸಿರುವವ ಅಧಿಕಾರಿಗಳಿಗೆ) - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
14. ಮಾನ್ಯ ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
15. ಸರ್ಕಾರದ ಕಾರ್ಯದರ್ಶಿ/ವಿಶೇಷ ಕಾರ್ಯದರ್ಶಿ, ಪಸಂಮೀ ಇಲಾಖೆರವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
16. ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿಗಳು/ಸಮನ್ವಯ-ಕಂಪೆಂಡಿಯಂ.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-131/ಮೀಇಯೋ/2020, ಬೆಂಗಳೂರು,
ದಿನಾಂಕ: 08-07-2020 ರ

## Annexure 1

### I. Roles and Responsibilities of State Level Approval and Monitoring Committee (SLAMC)

1. The State Level Approval and Monitoring Committee (SLAMC) will be responsible for consolidation of District Annual Fisheries Plans and preparation and approval of the State Annual Fisheries Plan and recommending to the Department of Fisheries, Government of India/National Fisheries Development Board (NFDB), Hyderabad.
2. The SLAMC will be responsible for implementation of the PMMSY at the State Level including its supervision and monitoring.
3. The SLAMC would be assisted by the State Programme Unit (SPU) for PMMSY.
4. The SLAMC will undertake convergence of activities under PMMSY with activities/interventions other Schemes and programmes at the State level.
5. The SLAMC will facilitate fostering of linkages with Banks/Financial Institutions for smooth implementation of beneficiary orientated Sub-components/activities under PMMSY.
6. The Chairperson may nominate additional state level officials as felt necessary.
7. The Chairperson may also nominate a maximum of one or two non-official eminent persons of the state preferably having knowledge of or associated with fisheries sector.
8. The aforesaid roles and responsibilities of SLAMC are for sub-components/activities under the Centrally Sponsored Scheme Component of PMMSY.

### II. Roles and Responsibilities of District Level Committee (DLC)

1. The DLC will be responsible for preparation and approval of the Annual District Fisheries Plan and recommending to the State Level Approval and Monitoring Committee (SLAMC).
2. The DLC will be responsible for implementation of the PMMSY at the District Level including its supervision and monitoring.
3. The DLC will be responsible for approval of beneficiaries for Beneficiaries oriented individual/group activities of PMMSY.

PMSY.



4. The DLC would be assisted by the District Programme Unit (DPU) in such districts wherever created by Government of India, Department of Fisheries.
5. The DLC will undertake convergence of activities under PMMSY with activities/interventions other Schemes and programmes at the District level.
6. The DLC will facilitate fostering of linkages with Banks/Financial Institutions to the beneficiaries under PMMSY.
7. The aforesaid roles and responsibilities of DLC are for sub-components/activities under the Centrally Sponsored Scheme Component of PMMSY.

Kamakshi U.A 8/7/2020
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಮೀನುಗಾರಿಕೆ)

09/07/2020